17

# ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:01-03-2021 ರ ನಡವಳಿಗಳು

**ವಿಷಯದ ಸಂಖ್ಯೆ: 710 /2020-21**

**ಪ್ರಸ್ತಾವನೆ :**

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿನ ಹೂಡಿ ವೃತ್ತದಿಂದ ಕುಂದಲಹಳ್ಳಿಗೆ ಸೇರುವ ಮುಖ್ಯ ರಸ್ತೆಗೆ ಸದರಿ ಪ್ರದೇಶವು ಹೊಂದಿಕೊಂಡಿದ್ದು, ಮುಖ್ಯ ರಸ್ತೆಯಿಂದ ಸದರಿ ಮುನಿಸ್ವಾಮಿ ಶೆಟ್ಟಿ ಬಡಾವಣೆಗೆ ಸಂಪರ್ಕ ಕಲ್ಪಿಸಲು ಏಕ ಮಾತ್ರ ರಸ್ತೆಯಾಗಿದ್ದು, ಸಾರ್ವಜನಿಕರ ಸಂಚಾರಕ್ಕೆ, ವಾಹನಗಳ ಸಂಚಾರಕ್ಕೆ ಅತ್ಯಾವಶ್ಯಕವಾಗಿರುತ್ತದೆ.

ಈ ಹಿನ್ನಲೆಯಲ್ಲಿ, ಪ್ರಸ್ತಾಪಿತ ರಸ್ತೆಯನ್ನು ಅಭಿವೃದ್ಧಿ ಪಡಿಸಲು ಅವಶ್ಯವಿರುವ ಜಾಗವನ್ನು ಭೂ-ಸ್ವಾಧೀನ ಪಡಿಸಿಕೊಳ್ಳಬೇಕಾದ ಸ್ವತ್ತುಗಳಿಗೆ ಸಂಬಂಧಿಸಿದಂತೆ ಮೋಜಿಣಿದಾರರು ನಕ್ಷೆಯನ್ನು ತಯಾರಿಸಿ ಸಲ್ಲಿಸಿರುತ್ತಾರೆ. ಸದರಿ ರಸ್ತೆಯು ಪರಿಷ್ಕೃತ ಮಹಾನಕ್ಷೆ-2015 ರ ನಕ್ಷೆಯಲ್ಲಿ ಇಲ್ಲದಿರುವುದರಿಂದ ಸದರಿ ರಸ್ತೆ ಅಭಿವೃದ್ಧಿ ಪಡಿಸಲು ಹೊಸ ಟಿ.ಡಿ.ಆರ್ ನಿಯಮಾವಳಿ ಅಧಿಸೂಚನೆ ಸಂಖ್ಯೆ: UDD 283 BEMRUPRA 2015, Bangalore,Dt.04/03/2017 ರ ರೂಲ್ ನಂ 3 ರಲ್ಲಿ ಅವಕಾಶವಿದ್ದು, ರೂಲ್ ನಂ.3 ಕೆಳಕಂಡತಿದೆ;

> Notifying 'Area' for public purpose:-(1) Ina Local planning Area listed at Appendix-1 if any public Authority requires any Area for public purpose, it shall notify the same in Form-1 stating the facts of the Area required by the authority specifying the limits of the Area along with the statement specifying the land which is required to be acquired in lieu of compensation under the right to fair compensation and Transparency in Land Acquisition, Rehabilitation and Resettlement Act, 2013 (Central Act 30 of 2013) and entitled to be granted Development Rights in the Official gazette and in one or more news papers circulating within the Local Planning Area as the Public Authority deems fit)

ಮೇಲ್ಕಂಡ ನಿಯಮಾವಳಿಯಂತೆ ಸಾರ್ವಜನಿಕ ಉಪಯೋಗಕ್ಕೆ ಅವಶ್ಯವಿರುವ ಜಾಗವನ್ನು ಟಿ.ಡಿ.ಆರ್ ಮೂಲಕ ಸ್ವಾಧೀನಪಡಿಸಿಕೊಳ್ಳಲು ನಮೂನೆ-1 ರಂತೆ ಅಧಿಸೂಚನೆ ಪ್ರಕಟಿಸಲು ಪಾಲಿಕೆಯ ನಗರ ಯೋಜನೆ ಅಭಿವೃದ್ಧಿ ಸ್ಥಾಯಿ ಸಮಿತಿ ಮತ್ತು ಪಾಲಿಕೆಯ ಕೌನ್ಸಿಲ್ ಸಭೆಯ ಅನುಮೋದನೆ ಪಡೆದು ಸರ್ಕಾರದ ಸ್ಥಿರೀಕರಣ ಅನುಮೋದನೆ ಪಡೆಯಬೇಕಾಗಿರುತ್ತದೆ.

ಪ್ರಸ್ತಾಪಿತ ರಸ್ತೆ ಅಭಿವೃದ್ಧಿ ಪಡಿಸಲು ಅವಶ್ಯವಿರುವ ಭೂಮಿಯನ್ನು ಭೂ-ಸ್ವಾಧೀನ ಪಡಿಸಿಕೊಳ್ಳಲು ಮೋಜಿಣಿದಾರರು ರೆವೆನ್ಯೂ ಸರ್ವೆ ಮಾಡಿ ನಕ್ಷೆಯನ್ನು ತಯಾರಿಸಿದ್ದು, ಸದರಿ ನಕ್ಷೆಯಂತೆ ಟಿ.ಡಿ.ಆರ್ ಮೂಲಕ ಸ್ವಾಧೀನ ಪಡಿಸಿಕೊಳ್ಳಲು ಒಟ್ಟು 791.45 ಚ.ಮೀ ಜಾಗದ ಅವಶ್ಯಕತೆ ಇರುತ್ತದೆ. ಪ್ರಸ್ತಾಪಿತ ರಸ್ತೆಯ ಪಥದಲ್ಲಿ ಬರುವ ಮಾಲೀಕರ ಸ್ವತ್ತುಗಳ ವಿವರಗಳನ್ನು ನಕ್ಷೆಯಲ್ಲಿ ಗುರುತಿಸಿರುವಂತೆ ಸ್ವತ್ತುಗಳ ಮಾಲೀಕತ್ವದ ಬಗ್ಗೆ ಸಹಾಯಕ ಕಂದಾಯ ಅಧಿಕಾರಿ (ಹೂಡಿ ಉಪವಿಭಾಗ) ರವರು ದೃಡೀಕರಣ ನೀಡಿರುವ ಹಿನ್ನೆಲೆಯಲ್ಲಿ ಅವಶ್ಯವಿರುವ ಜಾಗದ ಮಾಲೀಕರ ಸ್ವತ್ತುಗಳ ವಿವರಗಳು ಕೆಳಕಂಡಂತಿವೆ;

| Sl No. | Name of the District | Name of the Taluk | Name of the Village | Sy.no / Khata no | Type of land | Nature of land | Area (in sqm) | Name and address of the Land owner /interested persons |
|---|---|---|---|---|---|---|---|---|
| 1 | Bangalore Urban | Bangalore East | Hoodi | 179/1 | Private Land | vacant | 791.45 | Ramachandra Shetty and others |

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ, ಪ್ರಸ್ತಾಪಿತ ಗರುಡಾಚಾರ್ ಪಾಳ್ಯ ವಾರ್ಡ್ ನಂ: 82 ರ ವ್ಯಾಪ್ತಿಯಲ್ಲಿ ಬರುವ ಮುನಿಸ್ವಾಮಿ ಶೆಟ್ಟಿ ಬಡಾವಣೆಯ ಮುಖ್ಯರಸ್ತೆಯನ್ನು ಅಭಿವೃದ್ಧಿಪಡಿಸಲು ಅವಶ್ಯವಿರುವ ಖಾಸಗಿ ಸ್ವತ್ತುನ್ನು ಭೂ-ಸ್ವಾಧೀನ ಪಡಿಸಿಕೊಳ್ಳಲು ಹಾಗೂ ಸದರಿ ರಸ್ತೆಯು ಆರ್.ಎಂ.ಪಿ-2015 ರಲ್ಲಿ ಸೇರಿರುವುದಿಲ್ಲವಾದುದರಿಂದ ರಸ್ತೆ ಅಭಿವೃದ್ಧಿ ಪಡಿಸಲು ಅವಶ್ಯವಿರುವ ಜಾಗಕ್ಕೆ ಹೊಸ ಟಿ.ಡಿ.ಆರ್ ನಿಯಮಾವಳಿ ಅನ್ವಯ ನಮೂನೆ-1 ರಂತೆ ಅಧಿಸೂಚನೆ ಹೊರಡಿಸುವ ಸಂಬಂಧ, ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಅಧಿಕಾರಗಳನ್ನು ಚಲಾಯಿಸಿ ಸೂಕ್ತ ತೀರ್ಮಾನಕ್ಕಾಗಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:11-02-2021ರ ಟಿಪ್ಪಣಿ.

**ತೀರ್ಮಾನ : ಆಯುಕ್ತರವರ ದಿನಾಂಕ:11-02-2021ರ ಟಿಪ್ಪಣಿಯನ್ನು ಒಪ್ಪಿದೆ.**

(ಗೌರವ ಗುಪ್ತ)
ಆಡಳಿತಗಾರರು

# ವಾರ್ಡ್ ಮಟ್ಟದ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:01-03-2021 ರ ನಡವಳಿಗಳು

## ವಿಷಯದ ಸಂಖ್ಯೆ: 694/2020-21

### ಪ್ರಸ್ತಾವನೆ :

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿನ ಬೀದಿ ದೀಪಗಳ ನಿರ್ವಹಣೆಗೆ ಸಂಬಂಧಿಸಿದಂತೆ 2016-17ನೇ ಸಾಲಿನಲ್ಲಿ ಟೆಂಡರ್ ಮುಖೇನ ಗುತ್ತಿಗೆಯನ್ನು ನೀಡಿ ನಿರ್ವಹಣೆ ಕಾಮಗಾರಿಯನ್ನು ಕೈಗೊಳ್ಳಲಾಗಿದ್ದು, ಸುಮಾರು ಮೂರರಿಂದ ನಾಲ್ಕು ವರ್ಷಗಳ ಕಾಲ ಗುತ್ತಿಗೆ ಕಾಲಾವಧಿಯನ್ನು ವಿಸ್ತರಣೆ ಮಾಡಲಾಗಿದ್ದು, ಪ್ರಸ್ತುತ ಸದರಿ ಬೀದಿ ದೀಪಗಳ ನಿರ್ವಹಣೆ ಗುತ್ತಿಗೆ ಅವಧಿಯು ಮುಕ್ತಾಯವಾಗಿರುತ್ತದೆ.

ಈ ಹಿನ್ನೆಲೆಯಲ್ಲಿ 2020-21ನೇ ಸಾಲಿನಲ್ಲಿ ಬೀದಿ ದೀಪಗಳ ನಿರ್ವಹಣೆಗಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ 8 ವಲಯಗಳಲ್ಲಿ ಕಾರ್ಯಪಾಲಕ ಅಭಿಯಂತರರು (ವಿದ್ಯುತ್) ರವರ ಟೆಂಡರ್ ಅಧಿಸೂಚನೆಗಳಂತೆ ಟೆಂಡರ್ ಆಹ್ವಾನಿಸಲಾಗಿದ್ದು, 8 ವಲಯಗಳ ಹೊಸ ಟೆಂಡರ್‌ಗಳು ತುರ್ತು ಹಿನ್ನಲೆಯಲ್ಲಿ ಮಾನ್ಯ ಆಡಳಿತಗಾರರವರ ಸಕ್ಷಮ ಪ್ರಾಧಿಕಾರದ ಅನುಮೋದನೆಯಂತೆ ಕಾರ್ಯಾದೇಶ ನೀಡಲಾಗಿದ್ದು, ಬೀದಿ ದೀಪ ಕಾಮಗಾರಿ ಸಂಕ್ಷಿಪ್ತ ವಿವರಗಳು ಕೆಳಕಂಡಂತಿರುತ್ತದೆ.

| Sl. No | Name of the Zone | No. of Wards | No of Packages | Estimated Cost Rs.in Lakhs |
|---|---|---|---|---|
| 1. | South | 44 | 24 | 1226.75 |
| 2. | East | 44 | 40 | 1314.41 |
| 3. | West | 44 | 26 | 824.58 |
| 4. | Yelahanka | 11 | 12 | 491.38 |
| 5. | Dasarahalli | 8 | 8 | 233.53 |
| 6. | Bommanahalli | 16 | 21 | 655.00 |
| 7. | Mahadevpura | 17 | 18 | 746.96 |
| 8. | RR Nagar | 14 | 20 | 705.39 |
| **TOTAL** | | **198** | **169** | **6198.00** |

ಮುಂದುವರೆದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ಎಂಟು ವಲಯಗಳ ಒಟ್ಟು 198 ವಾರ್ಡ್‌ಗಳಲ್ಲಿ ಬೀದಿ ದೀಪ ವ್ಯವಸ್ಥೆಯಲ್ಲಿ ಇಂಧನ ದಕ್ಷತೆ ಕ್ರಮಗಳನ್ನು ಅಳವಡಿಸಲು ಪಿಪಿಪಿ ಆಧಾರದ ಮೇಲೆ 10 ವರ್ಷಗಳ ಓ & ಎನ್ ಮತ್ತು 85.50% ರ ಖಾತರಿ ವಿದ್ಯುತ್ ಉಳಿತಾಯ ಘೋಷಿಸಿರುವ ಹೊರ ಗುತ್ತಿಗೆ ಕಂಪನಿಗೆ ವಹಿಸಲಾಗಿರುತ್ತದೆ. ಸದರಿ ಗ್ಲೋಬಲ್ ಟೆಂಡರ್ ಕಾಮಗಾರಿಯ ಗುತ್ತಿಗೆಯನ್ನು ವಹಿಸಿಕೊಂಡಿರುವ ಸಂಸ್ಥೆಯು 5 ಹಂತದಲ್ಲಿ ಕಾರ್ಯನಿರ್ವಹಿಸಲಿದ್ದು, ಪ್ರತಿ ಹಂತದಲ್ಲಿ ಈಗಾಗಲೇ ಅಳವಡಿಸಿರುವ ಬೀದಿ ದೀಪಗಳನ್ನು ತೆರವುಗೊಳಿಸಿ, ಹೊಸದಾಗಿ ಎಲ್.ಇ.ಡಿ ಬೀದಿ ದೀಪಗಳನ್ನು ಅಳವಡಿಸಬೇಕಿದ್ದು ಗುತ್ತಿಗೆ ಕಾಲಾವಧಿಯು 2.5 ವರ್ಷಗಳಾಗಿರುತ್ತದೆ. ಈ ರೀತಿ ಆಯಾ ವಲಯ / ವಾರ್ಡ್ / ಪ್ಯಾಕೇಜ್‌ಗಳ ಹಳೆಯ ಬೀದಿ ದೀಪಗಳನ್ನು ತೆರವುಗೊಳಿಸಿ, ಹೊಸದಾಗಿ ಎಲ್.ಇ.ಡಿ ಬೀದಿ ದೀಪಗಳನ್ನು ಅಳವಡಿಸಿದ ಕೂಡಲೇ ಪ್ರಸ್ತುತ ಕರೆದಿರುವ ಸದರಿ ವಲಯ / ವಾರ್ಡ್ / ಪ್ಯಾಕೇಜ್ ವ್ಯಾಪ್ತಿಯ ಟೆಂಡರ್‌ನ ನಿರ್ವಹಣಾ ಗುತ್ತಿಗೆ ಕರಾರನ್ನು ರದ್ದುಗೊಳಿಸುವ ಷರತ್ತು ವಿಧಿಸಲಾಗಿದ್ದು, ಇದರಿಂದ ಗ್ಲೋಬಲ್ ಟೆಂಡರ್ ನಿರ್ವಹಣೆ ಜೊತೆಗೆ ಪುನರಾವರ್ತನೆ ಆಗುವ ಸಂಭವವಿರುವುದಿಲ್ಲ ಜೊತೆಗೆ ಹೊಸದಾಗಿ ಆಹ್ವಾನಿಸಿರುವ ಬೀದಿ ದೀಪಗಳ ನಿರ್ವಹಣಾ ಟೆಂಡರ್‌ನಲ್ಲಿ ಸರ್ಕಾರದ ಆದೇಶಾನುಸಾರ ಪರಿಶಿಷ್ಟ ಜಾತಿ ಮತ್ತು ಪಂಗಡದವರುಗಳಿಗೆ ಶೇ.24.10 ರಷ್ಟು ಕಾಮಗಾರಿಗಳಲ್ಲಿ ಮೀಸಲಾತಿಯನ್ನು ಸಹ ನಿಗಧಿಪಡಿಸಿ ಟೆಂಡರ್ ಆಹ್ವಾನಿಸಲಾಗಿರುತ್ತದೆ.

ಪಾಲಿಕೆಯ ಬೀದಿ ದೀಪ ನಿರ್ವಹಣಾ ಕಾಮಗಾರಿಗಳ ಅನುದಾನ ನಿಗದಿ ಪೂರ್ವ ಈ ಕಛೇರಿಯ ಆದೇಶ ಸಂಖ್ಯೆ:ಮುಲೆಅ/ಆಯವ್ಯಯ-2019-20/ಪಿಆರ್/11/2018-19, ದಿನಾಂಕ:12-06-2019ರ ಆದೇಶದಲ್ಲಿನ ನಿರ್ದೇಶನ ಹಾಗೂ ಅನುಮೋದನೆಯಂತೆ ಬೀದಿ ದೀಪಗಳ ನಿರ್ವಹಣಾ ಕಾಮಗಾರಿಗಳ ಕ್ರಿಯಾ ಯೋಜನೆಯನ್ನು ಕಾಮಗಾರಿ ಸ್ಥಾಯಿ ಸಮಿತಿಯ ಘಟನೋತ್ತರ ಮಂಜೂರಾತಿ ಪಡೆದ ನಂತರವೇ ಯಶಸ್ವಿ ಗುತ್ತಿಗೆದಾರರಿಗೆ ಬಿಲ್ ಪಾವತಿಸುವ ಷರತ್ತನ್ನು ಕಾಮಗಾರಿ ಪ್ರಮಾಣ ಪತ್ರದಲ್ಲಿ ನಮೂದಿಸಿಕೊಂಡು 2019-20 ರ ESCROW H/A ಪಿ-0300 ರಡಿ ಮೀಸಲಿರಿಸಿರುವ ರೂ.6200.00 ಲಕ್ಷಗಳಲ್ಲಿ ಆಯಾ ವಲಯದ ಉಪ ನಿಯಂತ್ರಕರು (ಹಣಕಾಸು) ರವರ ಕಛೇರಿಯಲ್ಲಿ ಜಾಬ್‌ಸಂಖ್ಯೆ ನೀಡಲು ಅನುದಾನ ಹಂಚಿಕೆ ಮಾಡುವ ಷರತ್ತಿಗೊಳಪಡಿಸಿ ಅನುದಾನ ನಿಗಧಿಪಡಿಸಲಾಗಿದ್ದು ಹಾಲಿ ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡಿದ್ದು ತುರ್ತು ಹಿನ್ನೆಲೆಯಲ್ಲಿ ಮಂಜೂರಾತಿ ನಿರೀಕ್ಷಿಸಿ ಕ್ರಿಯಾಯೋಜನೆ ಅನುಮೋದನೆಯ ಪೂರ್ವ ಟೆಂಡರ್ ಆಹ್ವಾನಿಸಿ ಕಾರ್ಯಾದೇಶವನ್ನು ನೀಡಿರುವ ಕ್ರಮವನ್ನು ಸ್ಥಿರೀಕರಿಸಲು ಹಾಗೂ ಘಟನೋತ್ತರ ಮಂಜೂರಾತಿ ನೀಡಿ ಪಾಲಿಕೆಯ 8 ವಲಯ ವ್ಯಾಪ್ತಿಯ 169 ಸಂಖ್ಯೆಯ ರೂ.6198.00 ಲಕ್ಷಗಳ ಮೊತ್ತದ ಬೀದಿ ದೀಪ ನಿರ್ವಹಣಾ ಕಾಮಗಾರಿಗಳ ಕ್ರಿಯಾಯೋಜನೆಯನ್ನು ಅಧಿಕಾರ ಪ್ರತ್ಯಾಯೋಜನೆಯಂತೆ ಅನುಮೋದನೆ ಪಡೆದುಕೊಂಡು ಚಾಲನೆಗೊಳಿಸುವ ಸಂಬಂಧ, ವಾರ್ಡ್ ಮಟ್ಟದ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಅಧಿಕಾರಗಳನ್ನು ಚಲಾಯಿಸಿ ಸೂಕ್ತ ತೀರ್ಮಾನಕ್ಕಾಗಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:15-02-2021ರ ಟಿಪ್ಪಣಿ.

**ತೀರ್ಮಾನ :** **ಆಯುಕ್ತರವರ ದಿನಾಂಕ:15-02-2021 ರ ಟಿಪ್ಪಣಿಯನ್ನು ಒಪ್ಪಿದೆ.**

(ಗೌರವ ಗುಪ್ತ)
ಆಡಳಿತಗಾರರು